ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸೊರಕೆಯವರು ಹೇಳಿದಂಥ ವಿಚಾರ ಅಂದರೆ ಇಲ್ಲಿ ೬೬ ಲಕ್ಷ ರೂಪಾಯಿಗಳು ಏನು ನಷ್ಟವಾಗಿದೆ, ಅದು ಕಾರ್ಮಿಕರಿಂದ ಆಗಿಲ್ಲ ಎಂದು ಅವರು ಹೇಳಿದ್ದಾರೆ ನಾನೂ ಸಹ ಕಾರ್ಮಿಕರು ನಷ್ಟ ಮಾಡಿದ್ದಾರೆಂದು ಉತ್ತರದಲ್ಲಿ ಹೇಳಿಲಿಲ್ಲ. ಒಟ್ಟಾರೆ ಕಾರ್ಪೊರೇಷನ್‌ನಲ್ಲಿ ೬೬ ಲಕ್ಷ ರೂಪಾಯಿ ನಷ್ಟವಾಗಿದೆ. ಕ್ಯಾರಿ ಓವರ್ ಲಾಸ್ ಬಂದಿದೆ. ಅದಕ್ಕೋಸ್ಕರ ಹೆಚ್ಚು ಉತ್ಪನ್ನ ಮಾಡಬೇಕಾಗುತ್ತದೆ, ಇಲ್ಲಿ ವೇತನ ಭತ್ಯೆಗಳ ಬಗ್ಗೆ ಮುಷ್ಕರ ಮಾಡಿದ್ದಾರೆ. ಅಲ್ಲಿ ಕೆಲವರು ಮಾತ್ರ ಮಾಡಿದ್ದಾರೆ. ೧೨೩೫ ಜನರು ಮಾಡಿದ್ದಾರೆ ಎನ್ನತಕ್ಕದ್ದು, ಅಷ್ಟು ಜನ ಮಾತ್ರ ಎನ್ನತಕ್ಕದ್ದು ಅದು ಸರಿಯಾದ ಟೋನ್ ಅಲ್ಲ ಎಂದು ಶ್ರೀಮಾನ್ ಉಮರಬ್ಬ ಅವರು ಹೇಳಿದ್ದಾರೆ. ಇಲ್ಲಿ ೫ ಕಾರ್ಮಿಕ ಸಂಘಗಳಿವೆ.....

ಶ್ರೀ ಬಿ.ಎ. ಉಮರಬ್ಬ.—ನಿಮ್ಮ ಪಕ್ಷದ್ದೂ ಇದೆ.

ಶ್ರೀ ಸಿದ್ದರಾಮಯ್ಯ.—ನಮ್ಮ ಪಕ್ಷದ್ದಾಗಲಿ, ನಿಮ್ಮ ಪಕ್ಷದ್ದಾಗಲಿ, ನಾನು ಯಾವುದೇ ಪಕ್ಷದ ಬಗ್ಗೆಯೂ ಹೇಳಿಲಿಲ್ಲ. ಅಲ್ಲಿ ೫ ಕಾರ್ಮಿಕ ಸಂಘಗಳಿವೆ ಈ ೫ ಕಾರ್ಮಿಕ ಸಂಘಗಳ ಪೈಕಿ ಒಂದೊಂದು ಸಂಘವೂ ಒಂದೊಂದು ಸಾರಿ ಮುಷ್ಕರವನ್ನು ಮಾಡತಕ್ಕ ಕೆಲಸವನ್ನು ಮಾಡಿವೆ. ಅವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು ಮತ್ತು ಕಾರ್ಮಿಕರ ಜೊತೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಳ್ಳಬೇಕೆಂಬ ಬಗ್ಗೆ ಭಿನ್ನಾಭಿಪ್ರಾಯದ ಮಾತೇ ಇಲ್ಲ, ಆದರೆ ಇಲ್ಲಿ ಅವರು ಕನ್ಸಲಿಯೇಷನ್ ಮೀಟಿಂಗ್ ಆಗಿ ಏನು ನೋಟಿಫಿಕೇಷನ್ ಆಗಿದೆ ಅದರಲ್ಲಿ ಏನು ನಮೂದು ಆಗಿದೆ ಅದಕ್ಕಿಂತಲೂ ಹೆಚ್ಚಿನ ವೇತನವನ್ನು ಕೊಡುತ್ತಿದ್ದೇವೆ. ಅದು ಏನೇ ಇರಲಿ ಈಗ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಊರಿಗೆ ಬಂದಿದ್ದಾರೆ. ಅವರ ಜೊತೆ ಮಾತನಾಡಬೇಕೆಂದು ನೀವು ಹೇಳುತ್ತಿದ್ದೀರಿ. ಕೂಡಲೇ ಅವರ ಜೊತೆ ಮಾತನಾಡಿ ಎಲ್ಲ ವಿಷಯಗಳನ್ನೂ ಸಮಗ್ರವಾಗಿ ಪರಿಶೀಲಿಸಿ ಆದಕ್ಕೆ ಒಂದು ಸೂಕ್ತ ಪರಿಹಾರವನ್ನು ಕಂಡುಹಿಡಿಯುವುದಾಗಿ ಒಂದು ಆಶಯವನ್ನು ವ್ಯಕ್ತಪಡಿಸುತ್ತೇನೆ. ಅವರು ವಿದೇಶಕ್ಕೆ ಏತಕ್ಕೆ ಹೋಗಿದ್ದರೆಂದರೆ ಆಲ್ಲಿ ಅಂದರೆ ಮಲೇಷ್ಯ, ನ್ಯೂಜಿಲೆಂಡ್‌ನಲ್ಲಿ ಬಹಳ ಬೇಗ ಬೆಳೆಯತಕ್ಕ ಮರಗಳ ತಳಗಳಿವೆ. ಮತ್ತು ಇದರ ಬಗ್ಗೆ ಹೊಸ ಹೊಸ ಸಂಶೋಧನೆಗಳನ್ನೂ ಕೂಡ ಅವರು ಮಾಡಿರುವುದರಿಂದ ಅದನ್ನೆಲ್ಲಾ ತಿಳಿದುಕೊಂಡು ಬರುವುದಕ್ಕಾಗಿ ಹೋಗಿದ್ದರು. ಆ ನೂತನ ಪದ್ಧತಿಗಳನ್ನು ನಮ್ಮಲ್ಲಿ ಅಳವಡಿಸಿಕೊಂಡರೆ ನಷ್ಟವಾಗಿರುವುದನ್ನು ಸರಿಪಡಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಮತ್ತು ಮುಷ್ಕರ ಏನು ನಡೆಯುತ್ತಿದೆ ಈ ವಿಚಾರದಲ್ಲಿಯೂ ಕೂಡ ಪರಿಶೀಲನೆ ನಡೆಸಿ ಸೂಕ್ತ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡಲಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಪಟ್ಟಮಕ್ಕಿ ರತ್ನಾಕರ್.—೧೯ನೇ ತಾರೀಖಿನ ಮಂಷ್ಕರದ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಸಿದ್ದರಾಮಯ್ಯ.—ಇದರ ಬಗ್ಗೆ ತೀವ್ರ ಗಮನಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ,

೮) ವರಾಹಿ ಜಲವಿದ್ಯುತ್ ಯೋಜನೆಯಿಂದಾಗಿ ಸಾವಿರಾರು ಎಕರೆ ಕಾಡು ನಾಶವಾಗಿದ್ದು ಈಗ ಮಾಲತಿ ಜಲಾಶಯ ಯೋಜನೆಯನ್ನು ಕಾರ್ಯಗತ ಮಾಡಿದರೆ ಇದರಿಂದಲೂ ಸಾವಿರಾರು ಎಕರೆ ಕಾಡು ನಾಶವಾಗುವುದರಿಂದ ಈ ಯೋಜನೆಯನ್ನು ಪ್ರಾರಂಭ ಮಾಡದಿರುವ ಬಗ್ಗೆ.

ಶ್ರೀ ಪಟ್ಟಮಕ್ಕಿ ರತ್ನಾಕರ್.—ಮಾನ್ಯ ಸಭಾಧ್ಯಕ್ಷರೆ, ವರಾಹಿ ಜಲ ವಿದ್ಯುತ್ ಯೋಜನೆಯಿಂದಾಗಿ ಸಾವಿರಾರು ಎಕರೆ ಕಾಡು ನಾಶವಾಗಿದ್ದು ಈಗ ಮಾಲತಿ ಜಲಾಶಯ ಯೋಜನೆಯನ್ನು ಕಾರ್ಯಗತ ಮಾಡಿದರೆ ಇದರಿಂದಲೂ ಸಾವಿರಾರು ಎಕರೆ ಕಾಡು ನಾಶವಾಗುವುದರಿಂದ ಈ ಯೋಜನೆಯನ್ನು ಪ್ರಾರಂಭ ಮಾಡದಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಖಾತೆ ಸಚಿವರು).— ಮಾನ್ಯ ಉಪಾಧ್ಯಕ್ಷರೆ:—ಮಾಲತಿ ಯೋಜನೆಯು ತುಂಗಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿ ಈ ಯೋಜನೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿರುವ ಗಾಜನೂರು ಬಳಿ ತುಂಗಾ ಅಣೆಕಟ್ಟನ್ನು ಎತ್ತರಿಸುವುದಲ್ಲದೆ, ಮಾಲತಿ ನದಿಗೆ (ತುಂಗಾ ನದಿಯ ಉಪನದಿ) ಅಡ್ಡಲಾಗಿ ಒಂದು ಜಲಾಶಯವನ್ನು ನಿರ್ಮಿಸುವ ಮೂಲಕ ಶಿವಮೊಗ್ಗ, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸುಮಾರು ೩.೨ ಲಕ್ಷ ಎಕರೆಗಳಿಗೆ ನೀರಾವರಿ ಒದಗಿಸುವ ಉದ್ದೇಶವಿದ್ದು ಯೋಜನೆಯು ಇನ್ನೂ ಅನ್ವೇಷಣೆಯಲ್ಲಿದೆ. ಈ ಯೋಜನೆ ಕಾರ್ಯಗತವಾದರೆ ಕೆಳಕಂಡ ಜಮೀನು ಪಂಳುಗಡೆಯಾಗುವುದೆಂದು ಗುರುತಿಸಲಾಗಿದೆ.

೧)	ತೀರ್ಥಹಳ್ಳಿ ತಾಲ್ಲೂಕು	೨೩೦೬ ಎಕರೆಗಳು
೨)	ಶೃಂಗೇರಿ ತಾಲ್ಲೂಕು	೧೮೨೫ ಎಕರೆಗಳು
೩)	ಕೊಪ್ಪ ತಾಲ್ಲೂಕು	೧೪೨೨ ಎಕರೆಗಳು
೪)	ತೀರ್ಥಹಳ್ಳಿ ತಾಲ್ಲೂಕಿನ (ತುಂಗಾ ಅಣೆಕಟ್ಟು ಮಾರ್ಪಾಡಿಗಾಗಿ)	೨೬೯ ಎಕರೆಗಳು
	ಒಟ್ಟು	೨೫೩೨ ಎಕರೆಗಳು

ತುಂಗಾ ಮೇಲ್ದಂಡೆ ಯೋಜನೆಯು ಇನ್ನೂ ಅನ್ವೇಷಣೆಯಲ್ಲಿ ಇದ್ದು, ಯೋಜನಾ ವರದಿ ಸಿದ್ಧವಾದ ನಂತರ, ಎಲ್ಲಾ ಅಂಶಗಳನ್ನೂ ಪರಿಗಣಿಸಿ, ತಾಂತ್ರಿಕ ಸಮಿತಿಯು ಒಪ್ಪಿಗೆ ಪಡೆದು, ಕೇಂದ್ರ ಯೋಜನ ಆಯೋಗದ ಅನುಮೋದನೆಗಾಗಿ ಕಳುಹಿಸಲಾಗುವುದು. ಯೋಜನೆಯನ್ನು ಇನ್ನೂ ಕೈಗೆತ್ತಿಕೊಂಡಿರುವುದಿಲ್ಲ.

† ಶ್ರೀ ಪಟಿಮುಕ್ಕಿ ರತ್ನಾಕರ್.— ಮಾನ್ಯ ಅಧ್ಯಕ್ಷರೇ. ಒಂದು ವಿಚಾರವನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಸಹ್ಯಾದ್ರಿ ಶ್ರೇಣಿಗೆ ಸಂಬಂಧಪಟ್ಟ ಹಾಗೆ ನಮ್ಮ ತಾಲ್ಲೂಕಿನಲ್ಲಿ ಚಕ್ರ, ಸಾವೇಹೊಕ್ಲು, ವರಾಹಿ ಈ ಯೋಜನೆಗಳನ್ನು ತೆಗೆದುಕೊಂಡಿದ್ದರಿಂದ ಸುಮಾರು ೩೮ ಸಾವಿರ ಎಕರೆಗಳಷ್ಟು ಕಾಡನ್ನು ಕಳೆದುಕೊಂಡಿದ್ದೇವೆ. ಜೊತೆಗೆ ಅಡಿಕೆ ತೋಟಗಳು ಸಾಗುವಳಿ ಜಮೀನುಗಳನ್ನು ಕಳೆದುಕೊಂಡಿದ್ದೇವೆ. ಜನರು ಇದರಿಂದ ಬಹಳಷ್ಟು ತೊಂದರೆಗೆ ಈಡಾಗಿದ್ದಾರೆ. ಇದೇ ಸರಹದ್ದಿನಲ್ಲಿ ಮಲೆನಾಡಿಗೆ ಸಂಬಂಧಪಟ್ಟ ಹಾಗೆ ಮಾಲತಿ ಜಲಾನಯನ ಯೋಜನೆಯನ್ನು ಕೈಗೊಳ್ಳುವುದರಿಂದ ಸುಮಾರು ೨೫ ಸಾವಿರದಿಂದ ೫೦ ಸಾವಿರ ಎಕರೆಗಳಷ್ಟು ಪ್ರದೇಶವನ್ನು ಕಳೆದುಕೊಳ್ಳಬೇಕಾಗಿ ಬರುತ್ತದೆ. ಮತ್ತೆ ಇಲ್ಲಿ ೧೭ ಸಾವಿರ ಎಕರೆಗಳಷ್ಟು ಕಾಡನ್ನೂ ಸಹ ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ. ದಯವಿಟ್ಟು ತುಂಗಾ ಮೇಲ್‌ದಂಡೆ ಯೋಜನೆಯನ್ನು ಪೂರೈಸಿ ಈಗಲೂ ನೀರನ್ನು ಒದಗಿಸಲಿಕ್ಕೆ ಪ್ರಯತ್ನ ಪಟ್ಟರೆ ಯಾವುದೇ ತೊಂದರೆಯಾಗುವುದಿಲ್ಲ. ಮಾಲತಿ ಜಲನಯನ ಅಣೆಕಟ್ಟನ್ನು ಕಟ್ಟಿ ಅಲ್ಲಿಂದ ನೀರನ್ನು ತೆಗೆದುಕೊಂಡು ಹೋಗುವ ಯೋಜನೆಯನ್ನು ಹಾಕಿಕೊಂಡರೆ ಮಲೆನಾಡಿನ ಜನರು ಅದನ್ನು ಸಹಿಸುವುದಕ್ಕಾಗುವುದಿಲ್ಲ. ಪ್ರತಿಭಟನೆ ಮಾಡಬೇಕಾಗುತ್ತದೆ. ನಮ್ಮ ಹೆಣಗಳ ಮೇಲೆ ನೀವು ಈ ಯೋಜನೆಯನ್ನು ಕಟ್ಟಬೇಕಾಗುತ್ತದೆ. ಅಷ್ಟು ತೀವ್ರರೀತಿಯಾದ ವಿಚಾರವಾಗಿರುತ್ತದೆ. ಈ ಯೋಜನೆಯನ್ನು ತಾವೇನಾದರೂ ಮಾಡಿದರೆ ಇಡಿ ಮಲೆನಾಡು ಪೂರ್ಣವಾಗಿ ಮುಳುಗಡೆ ಯಾಗುತ್ತದೆ. ಇದರಿಂದಾಗಿ ೪೦ ಸಾವಿರ ಎಕರೆಯಿಂದ ಹಿಡಿದು ೭೦ ಸಾವಿರ ಎಕರೆಗಳಷ್ಟು ಕಾಡನ್ನು ಕಳೆದುಕೊಳ್ಳುತ್ತೇವೆ. ಈ ರೀತಿಯಾದ ಕಾಡನ್ನು ಬೆಳಸಬೇಕಾದರೆ ಸುಮಾರು ಒಂದು ಸಾವಿರ ವರ್ಷಗಳೇ ಬೇಕಾಗುತ್ತದೆ. ಆದ್ದರಿಂದ ಮಲೆನಾಡಿನ ಜನರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ತುಂಗಾ ಮೇಲ್‌ದಂಡೆ ಯೋಜನೆಯನ್ನು ಯಾವ ರೀತಿ ಮಾಡಬೇಕು ಎನ್ನುವ ಬಗ್ಗೆ ಯೋಚನೆ ಮಾಡಿ ಪೂರ್ಣ ಶಿ ಜಲಾನಯನ ಯೋಜನೆಯನ್ನು ದಯವಿಟ್ಟು ಕೈಬಿಡಬೇಕೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಅರ್ಥ ಮಾಡಿಕೊಂಡಿರುತ್ತೇನೆ. ನಿಜವಾಗಿಯೂ ಒಂದು ಅಂಶ ಸತ್ಯವಾಗಿದೆ. ವರಾಹ ವಿದ್ಯುತ್ ಯೋಜನೆಯಿಂದ ಬಹಳಷ್ಟು ಅರಣ್ಯ ಪ್ರದೇಶ ಮುಳುಗಡೆಯಾಗಿದೆ. ಆದ್ದರಿಂದ ಮಾಲತಿ ಯೋಜನೆಯನ್ನು ಕೈಗೆತ್ತಿಕೊಳ್ಳುವುದರಿಂದ ಎಷ್ಟು ಮುಳುಗಡೆಯಾಗಂತ್ತದೆನ್ನುವುದನ್ನೂ ಕೂಡ ಸೂಕ್ಷ್ಮವಾಗಿ ಹೇಳಿದ್ದೇನೆ, ಈ ಸಂದರ್ಭದಲ್ಲಿ ನಾನು ಹೇಳುವುದಾದರೂ ಇಷ್ಟೇ, ಮುಳುಗಡೆಯಾಗುವುದನ್ನು ಎಷ್ಟು ಕಡಿಮೆ ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ಪರಿಶೀಲನೆ ಮಾಡುತ್ತೇನೆ. ಒಂದು ಕಡೆ ನೀರಿನ ಉಪಯೋಗ ಮಾಡಿಕೊಳ್ಳಬೇಕು, ಇನ್ನೊಂದು ಕಡೆ ಭೂಮಿ ಮುಳುಗಡೆಯಾಗಬಾರದು. ಎರಡನ್ನೂ ಏಕಕಾಲದಲ್ಲಿ ಸಮರ್ಥನೆ ಮಾಡಿಕೊಳ್ಳುವುದು ಬಹಳ ಕಷ್ಟ. ಆದ್ದರಿಂದ ಇಷ್ಟು ಮಾತ್ರ ಹೇಳುತ್ತೇನೆ, ಕೆಲವರು ಭೂಮಿಯನ್ನು ಕಳೆದುಕೊಳ್ಳುತ್ತಾರೆ. ಭೂಮಿಯನ್ನು ಕಳೆದುಕೊಳ್ಳುತಕ್ಕಂಥ ರೈತರಿಗೆ ಸರಿಯಾದ ರೀತಿಯಲ್ಲಿ ಒಂದು ಔದಾರ್ಯವನ್ನು ಸರ್ಕಾರ ತೋರಿಸುತ್ತದೆ. ನಾಳೆ ಬೆಳಿಗ್ಗೆಯೇ ಇದನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಪರಿಸ್ಥಿತಿಯಲ್ಲಿಲ್ಲ. ಆದರೆ ಮಾಡುವಾಗ ಇದರಲ್ಲಿ ಎಷ್ಟು ಫ್ಲೋ ಇರಿಗೇಷನ್ ಆಗುತ್ತದೆ, ಎಷ್ಟು ಲಿಫ್ಟ್ ಇರಿಗೇಷನ್ ಆಗುತ್ತದೆ ಎನ್ನುವುದನ್ನು ಗಮನಿಸಲಾಗುತ್ತದೆ. ಲಿಫ್ಟ್ ಇರಿಗೇಷನ್‌ನಲ್ಲಿ ನೀರಿನ ಉಪಯೋಕ್ತತೆ ಜಾಸ್ತಿ ಮಾಡಿಕೊಳ್ಳುವ ಸಾಧ್ಯತೆ ಇದ್ದರೆ ಇದರ ಬಗ್ಗೆ ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆಂದು ಸೂಕ್ಷ್ಮವಾಗಿ ಹೇಳುತ್ತೇನೆ.

ಶ್ರೀ ಪಟಮಕ್ಕಿ ರತ್ನಾಕರ್.— ಮಾನ್ಯ ಅಧ್ಯಕ್ಷರೆ, ಈಗಾಗಲೇ ತಮ್ಮ ಸರ್ಕಾರದ ರಿಪೋರ್ಟ್ ಪ್ರಕಾರ ತೀರ್ಮಾನಕ್ಕೆ ಬಂದಿರುವ ಅಂಶ ೨ ಲಕ್ಷ ೩ಳಿ ಸಾವಿರ ಎಕರೆ ಪ್ರದೇಶಗಳಿಗೆ ನೀರಿನ ಸೌಲಭ್ಯವನ್ನು ಒದಗಿಸಬೇಕು ಎನ್ನುವುದರ ಜೊತೆಗೆ ೩.೨ಳಿಳಿ ಟಿ.ಎಂ.ಸಿ. ನೀರನ್ನು ಶೇಕರಣೆ ಮಾಡತಕ್ಕಂಥದ್ದು ಇರುತ್ತದೆ. ಇಷ್ಟು ನೀರನ್ನು ಶೇಕರಣೆ ಮಾಡಬೇಕಾದರೆ ಮಾಲತಿ ಯೋಜನೆಯನ್ನು ಡೈವರ್ಟ್ ಮಾಡಿಕೊಳ್ಳಬೇಕಾಗಿದೆ. ಇದನ್ನು ಡೈವರ್ಟ್ ಮಾಡಿಕೊಳ್ಳುವುದರಿಂದ ಇಡೀ ತಾಲ್ಲೂಕು ಸಂಪೂರ್ಣವಾಗಿ ಮುಳುಗಡೆಯಾಗುವ ಸಂಗತಿ ಇದೆ. ಆದ್ದರಿಂದ ಫ್ಲೋ ಇರಿಗೇಷನ್‌ಗೆ ಹೆಚ್ಚು ಗಮನವನ್ನು ಕೊಡದೆ ಹೈಪವರ್‌ನಿಂದ ಎಷ್ಟು ಜಮೀನಿಗೆ ನೀರನ್ನು ಕೊಡಬಹುದು ಎನ್ನುವ ಬಗ್ಗೆ ಯೋಜನೆ ಮಾಡಬೇಕು. ಮಾಲತಿ ಜಲಾಶಯದ ಯೋಜನೆಯನ್ನು ಕಾರ್ಯಗತ ಮಾಡಿದಲ್ಲಿ ಸಂತರಾಮ್ ಅವಕಾಶವನ್ನು ಕೊಡುವುದಿಲ್ಲ ಇದರ ಬಗ್ಗೆ ಎಷ್ಟರಮಟ್ಟಿಗೆ ಹೋರಾಟ ಮಾಡಬೇಕೋ ಅಷ್ಟರಮಟ್ಟಿಗೆ ಹೋರಾಟ ಮಾಡಲು ನಾವು ಸಿದ್ಧರಾಗಿದ್ದೇವೆ. ನಮ್ಮ ಹೆಣಗಳ ಮೇಲೆ ಯೋಜನೆಯನ್ನು ಮಾಡ ಬೇಕಾಗುತ್ತದೆ. ಇಡಿ ತಾಲ್ಲೂಕಿನ ಜನ ಒಂದಾಗಿ ನಿಂತಿದ್ದೇವೆ, ಸಂಪೂರ್ಣವಾಗಿ ೭೦ ಸಾವಿರ ಎಕರೆ ಕಾಡನ್ನು ಈಗಾಗಲೇ ಕಳೆದುಕೊಂಡಿದ್ದು ಪೂರ್ತಿ ಕಾಡನ್ನು ಕಳೆದುಕೊಳ್ಳುವುದಕ್ಕೆ ಊರಜನರು ಬಿಡುವುದಿಲ್ಲ.
ಜಮೀನಿಗೆ ನೀರು ಕೊಡಬೇಕು, ಬೆಳೆಯಂನ್ನು ಬೆಳೆಸಬೇಕು, ನಿಜ, ಆದರೆ ಮಾಲತಿ ಜಲಾಶಯವನ್ನು ದೃಷ್ಟಿಯಲ್ಲಿಟ್ಟುಕೊಳ್ಳದೆ ಜನರಿಗೆ ನೀರು ಕೊಡಬೇಕೆಂಬ ಬಗ್ಗೆ ಯೋಚಿಸಬೇಕು ಮತ್ತು ನಿರ್ದಿಷ್ಟವಾಗಿ ಉತ್ತರಿಸಬೇಕು. ನಾವು ೨೧ರಂದು ಬೃಹತ್ ಚಳುವಳಿ ಮಾಡಬೇಕೆಂದಿದ್ದೇವೆ. ಆದುದರಿಂದ ತಾವು ದಯವಿಟ್ಟು ಮಾಲತಿ ಜಲಾಶಯವನ್ನು ಬಿಟ್ಟು ನೀರು ಕೊಡುವುದಕ್ಕೆ ಸಾಧ್ಯವೆ ಎಂದು ಯೋಚಿಸ ಬೇಕು. ಈ ಬಗ್ಗೆ ನಿರ್ದಿಷ್ಟವಾಗಿ ಹೇಳಿಕೆ ಕೊಡಬೇಕು.

ಶ್ರೀ ಡಿ. ಟಿ. ಜಯಕುಮಾರ್.—೯೦ ಜನರಿಗೆ ಒಳ್ಳೆಯದಾಗಬೇಕೆಂದರೆ ಹತ್ತು ಜನರಿಗೆ ಕೆಟ್ಟದು ಆಗಬೇಕು. ಈ ನೀರಾವರಿ ಯೋಜನೆಯಿಂದ ನೂರಾರು ಜನರಿಗೆ ಅನುಕೂಲವಾಗುವುದಿಲ್ಲವೇ?

ಶ್ರೀ ಬಿ. ಎ. ಉಮರಬ್ಬ.—ನೂರಾರು ಜನರಿಗೆ ಒಳ್ಳೆಯದಾಗುವುದಾದರೆ ಏತಕ್ಕೆ ಮಾಡಬಾರದು ದಯವಿಟ್ಟು ಇದನ್ನು ಹಗುರವಾಗಿ ತೆಗೆದುಕೊಳ್ಳಬೇಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ವ್ಯಕ್ತಪಡಿಸಿರತಕ್ಕ ಭಾವನೆಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ, ಎರಡು ಆಲ್ಟರ್‌ನೇಟೀವ್ ಪ್ರೊಪೋಸಲ್ಸ್ ನಮ್ಮ ಮುಂದಿವೆ. ಆಲ್ಲಿ ಏತ ನೀರಾವರಿ ಯೋಜನೆಯನ್ನು ಮಾಡುವ ಮೂಲಕ ೩ ಲಕ್ಷ ಎಕರೆಗೆ ನೀರು ಕೊಡುವುದಕ್ಕೆ ಸಾಧ್ಯ, ಪವರ್ ಕೊರತೆ ಇರುವುದರಿಂದ ಮಾಲತಿ ಹಕ್ಕಿರ ಜಲಾಶಯವನ್ನು ನಿರ್ಮಾಣ ಮಾಡುವುದರಿಂದ ಫ್ಲೋ ಇರಿಗೇಷನ್ ಕಂ ಲಿಫ್ಟ್ ಇರಿಗೇಷನ್ ಮಾಡಬಹುದು. ಆಲ್ಟರ್ನೇಟೀವ್ ಪ್ರೊಪೋಸಲ್ಸ್ ಇರುವುದರಿಂದ ಸರ್ಕಾರ ಇನ್ನೂ ಅಂತಿಮ ನಿರ್ಣಯವನ್ನು ಮಾಡಿಲ್ಲ. ಅಂತೂ ನೀರನ್ನೂ ಉಪಯೋಗ

ಮಾಡಬೇಕು, ಮಾಡುತ್ತೇವೆ. ಧಾರವಾಡ ಮತ್ತು ರಾಯಚೂರು ಜಿಲ್ಲೆಗಳಿಗೆ ನೀರು ಕೊಡುವುದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಫ್ಲೋ ಅಥವಾ ಲಿಫ್ಟ್ ಇರಿಗೇಷನ್ ಮಾಡುವ ಬಗ್ಗೆ ಪ್ರೊಪೋಸಲ್ ಇರುವುದರಿಂದ ಇನ್ನೂ ಅಂತಿಮ ತೀರ್ಮಾನ ತೆಗೆದುಕೊಂಡಿಲ್ಲ. ತೀವ್ರ ಸ್ವರೂಪದ ಆಂಧೋಳನಕ್ಕೆ ಚುನಾವಣೆ ಹತ್ತಿರ ಬಂದಿಲ್ಲ.

ಶ್ರೀ ಪಟವಂಕ್ಕಿ ರತ್ನಾಕರ್.—ಮಲೆನಾಡಿನ ಜನ ಅಂದರೆ ಸ್ವಲ್ಪ ಸಾಧು ಸ್ವಭಾವದವರು, ಎಲ್ಲವನ್ನೂ ತುಳಿಕೊಳ್ಳುತ್ತಾರೆಂಬ ಭಾವನೆ ಸರ್ಕಾರಕ್ಕೆ ಇರಬಹುದು. ಬಗ್ಗು ಅಂದರೆ ಭೂಮಿಯ ವರೆಗೆ ಬಗ್ಗಬಹುದು, ಭೂಮಿಗೂ ಕೆಳಗೆ ಬಗ್ಗು ಅಂದರೆ ಅದು ಮಾತ್ರ ಸಾಧ್ಯವಿಲ್ಲ. ಮಲೆನಾಡಿನ ಜನ ಎದ್ದು ನಿಂತರೆ ಹೇಗೆ ಪ್ರತಿಭಟನೆ ಮಾಡಬಹುದೆಂದು ತಮಗೆ ಗೊತ್ತಿದೆ. ನಮ್ಮ ಆಂದೋಳನ ಅಂಥದ್ದು. ಆದುದರಿಂದ ಮೂಲತಿ ಜಲಾಶಯದ ವಿಚಾರವನ್ನು ಮರೆಯಿರಿ. ಬೇರೆ ಜಲಾಶಯದ ಬಗ್ಗೆ ಯೋಚನೆ ಮಾಡಿ ಆ ಭಾಗದ ಜನರಿಗೆ ನೀರು ಕೊಡತಕ್ಕ ಕೆಲಸ ಮಾಡಿ, ರೈತರ ಒಳ್ಳೆಯ ಕಾರ್ಯಕ್ರಮಗಳಿಗೆ ಯಾವ ವಿರೋಧವೂ ಇಲ್ಲ. ಆದರೆ ಮಲೆನಾಡನ್ನು ಮುಳುಗಿಸಿ ಮತ್ತೊಬ್ಬರನ್ನು ಬದುಕಿಸುತ್ತೇವೆ ಅಂದಾಗ ನಾವು ಮಾತ್ರ ಸಾಯುವುದಕ್ಕೆ ತಯಾರಿಲ್ಲ, ಹೋರಾಟ ಮಾಡಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಅವರು ಈಗಾಗಲೇ ಇಲ್ಲಿ ತೀವ್ರವಾಗಿ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ಅವರು ವ್ಯಕ್ತಪಡಿಸಿರುವ ಪ್ರತಿಭಟನೆ ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಬಿ. ಎ. ಉಮರಬ್ಬ.—ಗೋಪಾಲಗೌಡರ ತಾಲ್ಲೂಕನ್ನು ದೇವೇಗೌಡರು ವಂಚಿಂಗಿಸಿದರು ಎಂದು ಆಗುವುದು ಬೇಡ.

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆಯನ್ನು ಆಮೇಲೆ ತೆಗೆದುಕೊಳ್ಳೋಣ, ಈಗ ತೆಲುಗು ಗಂಗಾ ಬಗ್ಗೆ ವೀರಪ್ಪ ಮೊಯ್ಲಿ ಅವರೇ, ತಾವು ಮಾತನಾಡಿ.

ಶ್ರೀ ಕೆ. ಜೆ. ಜಾರ್ಜ್.—ಬೆಂಗಳೂರು ಫ್ಲಡ್ ವಿಚಾರ ೪ ದಿನಗಳಿಂದ ಪೆಂಡಿಂಗ್ ಇದೆ.

ಅಧ್ಯಕ್ಷರು.—ಸ್ವಲ್ಪ ನಿಧಾನ ಮಾಡಿ.

ಶ್ರೀ ಬಿ. ಎ. ಉಮರಬ್ಬ.—ತಮ್ಮ ಔದಾರ್ಯದ ಬಗ್ಗೆ ನಮ್ಮ ಕಾಳಜಿ ಇಲ್ಲ. ಗವರ್ನಮೆಂಟಿನ ಸೂಚನೆ ಇದೆ. ರೂಲ್ ೩೩೪ರ ಪ್ರಶ್ನೆಗಳು ಇವೆ. ನಿನ್ನೆ ದಿವಸ ರಾತ್ರಿ ೧೨ ಅಲ್ಲ ೧೩ ಗಂಟೆಯಾದರೂ ಕೂರೋಣಪೆಂದು ಗಂಟೆಯ ಹೆಸರು ಹೇಳಿದಿರಿ. ಆದರೆ ಪರಿಸ್ಥಿತಿ ಏನಾಯಿತು? ಆರೂವರೆಗೆ ಎದ್ದುಹೋದೆವು.

ಅಧ್ಯಕ್ಷರು.—ವಿರೋಧ ಪಕ್ಷದ ನಾಯಕರು ಅಡ್ಜರ್ನ್ ಮಾಡದಿದ್ದರೆ ನನಗೆ ಕೂರುವುದಕ್ಕೆ ಆಗುವುದಿಲ್ಲವೆಂದು ಸಿಟ್ಟಿಗೆದ್ದರು. ಬೆಳಗಿನಿಂದ ಕಾಯಿತು ಅವರಿಗೂ ಕೂಡ ಬೇಜಾರಾಗಿತ್ತು. ಆದರ ಸಲುವಾಗಿ ನಾಳೆ ಬೆಳಿಗ್ಗೆ ೯ಕ್ಕೆ ಸೇರೋಣ ಎಂದು ಅಡ್ಜರ್ನ್ ಮಾಡಿದೆ. ಆ ಕಡೆ ಮತ್ತು ಈ ಕಡೆ ನಾಯಕರುಗಳ ಅಭಿಪ್ರಾಯಗಳನ್ನು ತೆಗೆದುಕೊಂಡು ಸಭೆಯನ್ನು ನಡೆಸಬೇಕಾಗುತ್ತದೆ. ೧೨ ಅಲ್ಲ ೧೩ ಅಲ್ಲ ೨ಳ ಗಂಟೆಯಾದರೂ ನಾನು ಕೂರುವುದಕ್ಕೆ ತಯಾರಿದ್ದೇನೆ. ಆದರೆ ನಿನ್ನೆ ನಿಮ್ಮ ನಾಯಕರು ಯಾರು ಇದ್ದಾರೆ, ಅವರ ಅಭಿಪ್ರಾಯವನ್ನು ತೆಗೆದುಕೊಂಡೇ ಅವರ ಒಪ್ಪಿಗೆಯನ್ನು ಪಡೆದುಕೊಂಡೇ ಅಡ್ಜರ್ನ್ ಮಾಡಿದೆ.

(ಗೊಂದಲ)

ಏಕೆ ನೀವು ಕೆಲವರು ಸಂಜೆ ಸಮಯದಲ್ಲಿ ಬರುತ್ತೀರಿ. ಆದರೆ ನಿಮ್ಮ ವಿರೋಧಪಕ್ಷದ ನಾಯಕರು ಬೆಳಗ್ಗೆಯೇ ಬಂದಿರುತ್ತಾರೆ.....

ಶ್ರೀ ಮಲ್ಲಿಕಾರ್ಜುನ್ ಎಂ, ಖರ್ಗೆ.—ಇನ್ನೂ ೩-೪ ಇಂಪಾರ್ಟೆಂಟ್ ಇಷೂಸ್‌ಗಳಿವೆ. ಅವರಿಗೆ ಪ್ರಾಮಿಸ್ ಮಾಡಿದ್ದೀರಿ.

(ಗೊಂದಲ)

ಅಧ್ಯಕ್ಷರು.—ನಿನ್ನೆ ಅವರ ಸಮ್ಮತಿಯನ್ನು ತೆಗೆದುಕೊಂಡೇ ಸಭೆಯನ್ನು ಮುಂದಕ್ಕೆ ಹಾಕಿದ್ದೇನೆ

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ಪ್ರಿವಿಲೇಜ್ ಮೋಷನ್ ಅರ್ಧಕ್ಕೆ ನಿಂತಿದೆ. ಆರ್ಟಿಕಲ್ ೧೬೬ರ ಕೆಳಗೆ ಅವರನ್ನು ಪ್ರಾಸಿಕ್ಯೂಟ್ ಮಾಡಬೇಕೆಂದು ಲೋಕಸಭಾ ಸಮಿತಿಯೇ ತಿಳಿಸಿದೆ. ನಂತರ ತೆಲಂಗು ಗಂಗಾ ವಿಚಾರ ಇದೆ. ಇದನ್ನು ಯಾವಾಗ ಮುಂಗಿಸುವುದು?

ಅಧ್ಯಕ್ಷರು.—ತೆಲುಗು ಗಂಗ ಬಗ್ಗೆ ವೀರಪ್ಪ ಮೊಯ್ಲಿಯವರು ಪ್ರಾರಂಭ ಮಾಡಲಿ, ನಾನಂ ನನ್ನ ಚೇಂಬರ್‌ಗೆ ಬರುತ್ತೇನೆ. ಅಲ್ಲಿ ನಾವೆಲ್ಲರೂ ಕುಳಿತು ಹೇಗೆ ಮಾಡಬೇಕೆಂಬುದರ ಬಗ್ಗೆ ಮಾತನಾಡೋಣ.

ಶ್ರೀ ಕೆ. ಜೆ. ಜಾರ್ಜ್.—ಫ್ಲಡ್ ಬಗ್ಗೆ ಯಾವಾಗ ಚರ್ಚೆಗೆ ತೆಗೆದುಕೊಳ್ಳುತ್ತೀರಾ

ಅಧ್ಯಕ್ಷರು.—ಈಗ ಅವರು ಪ್ರಾರಂಭ ಮಾಡಲಿ, ನನ್ನ ಚೇಂಬರ್‌ಗೆ ನಾನು ಬರುತ್ತೇನೆ. ನೀವೂ ಅಲ್ಲಿಗೆ ಬನ್ನಿ ಮಾತನಾಡೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಎಷ್ಟು ಹೊತ್ತಿನವರೆಗೆ ಇವತ್ತು ಸಭೆ ನಡೆಯುತ್ತದೆ. ಅದರ ಮೇಲೆ ಅವಲಂಬನೆಯಾಗಿದೆ.

ಅಧ್ಯಕ್ಷರು.—ನಿಮ್ಮನ್ನು ಕೇಳಿಯೇ ಮಾಡೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇಷ್ಯೂಸ್‌ಗಳಿವೆ. ಟೆಲಿಫೋನ್ ಟ್ಯಾಪಿಂಗ್ ಬಗ್ಗೆ ಪ್ರಿವಿಲೇಜ್ ಮೋಷನ್ ಇದೆ, ಅದೇ ರೀತಿ ಲ್ಯಾಂಡ್ ರೆವಿನ್ಯೂ ವಿಷಯ, ತೆಲುಗಂ ಗಂಗಾ ಫ್ಲಡ್ ಇವೆಲ್ಲಾ ಇವೆಯಲ್ಲಾ.

ಅಧ್ಯಕ್ಷರು.—ಆಯಿತು. ಈಗ ಅವರು ಪ್ರಾರಂಭ ಮಾಡಲಿ. ಆಮೇಲೆ ನೋಡೋಣ

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಒಂದೊಂದೇ ಇಷ್ಯೂ ಸೆಟ್ಲ್ ಆಗಬೇಕಲ್ಲ, ಪ್ರಿವಿಲೇಜ್ ಮೋಷನ್ ಬಗ್ಗೆ ಅವರನ್ನು ಕರೆಸುತ್ತೇವೆಂದು ಹೇಳಿದ್ದೀರಿ. ಮೊಯ್ಲಿಯವರ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ರೂಲಿಂಗನ್ನೂ ಕೂಡ ಕೊಟ್ಟಿದ್ದೀರಿ. ಅವರ ಪಾಯಿಂಟ್ ಆಫ್ ಆರ್ಡರನ್ನು ಆಪ ಹೋಲ್ಡ್ ಕೂಡ ಮಾಡಿದ್ದೀರಿ. ಪಾರ್ಲಿಮೆಂಟ್ ಸಮಿತಿಯಲ್ಲೂ ಕೂಡ ಇದನ್ನು ರೈಸ್ ಮಾಡಿವೆ

ಅಧ್ಯಕ್ಷರು.—ನನ್ನ ಛೇಂಬರ್‌ಗೆ ಬನ್ನಿ. ಅಲ್ಲಿ ಮಾತನಾಡೋಣ. ಆದರೆ ನಿನ್ನೆಯೇ ಇವತ್ತು ಗವರ್ನಮೆಂಟ್ ಸೆಳೆಯುವ ಸೂಚನೆಯಾದ ಕೂಡಲೇ ತೆಲುಗು ಗಂಗಾ ವಿಷಯವನ್ನು ತೆಗೆದುಕೊಳ್ಳೋಣವೆಂದು ನಿರ್ಣಯ ಆಗಿತ್ತು. ಅದು ಮುಂಗಿಯಲಿ. ಆನಂತರ ಆದಷ್ಟು ಬೇಗ ಎಲ್ಲವನ್ನೂ ಮುಂಗಿಸೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಫ್ಲಡ್ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುವುದಿಲ್ಲವೆ,

ಅಧ್ಯಕ್ಷರು.—ಅದನ್ನೂ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹೇಗೆ ತೆಗೆದುಕೊಳ್ಳುತ್ತೀರಿ ? ಹೇಗೆ ಮಾಡುತ್ತೀರಿ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಸದನದ ಕಾರ್ಯಕಲಾಪಗಳನ್ನು ಇನ್ನೂ ಎರಡು ದಿವಸ ಮುಂದೂಡಿ.

ಅಧ್ಯಕ್ಷರು.—ನಾನು ವಿರೋಧಪಕ್ಷದ ನಾಯಕರನ್ನು, ನಿಮ್ಮನ್ನು ಕರೆಸುತ್ತೇನೆ. ಮೊನ್ನೆ ಗವರ್ನಮೆಂಟ್ ಸೆಳೆಯುವ ಸೂಚನೆ ಆದ ಮೇಲೆ ತೆಲುಗುಗಂಗಾ ವಿಚಾರ ಮುಂಗಿಸೋಣ ಅಂತ ನಿರ್ಣಯ ಆಗಿತ್ತು. ಈಗ ಮತ್ತೆ ಆ ಬಗ್ಗೆ ಚರ್ಚೆ ಮಾಡೋಣ. ಅವರು ಪ್ರಾರಂಭ ಮಾಡಲಿ ನಾನೂ ಕೂಡ ನನ್ನ ಛೇಂಬರ್‌ಗೆ ಬರುತ್ತೇನೆ. ನೀವೂ ಬನ್ನಿ. ಅಲ್ಲಿ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಕೆ. ಜೆ. ಜಾರ್ಜ್.—ಫ್ಲಡ್ ಬಗ್ಗೆ ಅರ್ಧ ಚರ್ಚೆಯಾಗಿದೆ. ೪ ದಿವಸಗಳಿಂದ ನಾವು ಅದರ ಬಗ್ಗೆ ಚರ್ಚೆ ಮಾಡಲು ಕಾಯುತ್ತಿದ್ದೇವೆ.

ಅಧ್ಯಕ್ಷರು.—ಗವರ್ನರ ಸಳಿಯುವ ಸೂಚನೆಯಾದ ಮೇಲೆ ತೆಗೆದುಕೊಳ್ಳೋಣ. ವೀರಪ್ಪ ಮೊಯ್ಲಿಯವರೇ, ಅವರಿಗೆ ಹೇಳಿ. ಗವರ್ನರ ಸೆಳೆಯುವ ಸೂಚನೆಯಾದ ಮೇಲೆ ತೆಗೆದುಕೊಳ್ಳೋಣ ಅಂತ.

(ಗೊಂದಲ)

ತೆಲುಗು ಗಂಗಾ ವಿಷಯವನ್ನು ಒಂದು ಗಂಟೆಯಲ್ಲಿ ಮುಗಿಸೋಣ. ಮತ್ತೆ ಗವರ್ನರ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

ಶ್ರೀ ಕೆ. ಜೆ. ಜಾರ್ಜ್.—ಫ್ಲಡ್ ಬಗ್ಗೆ ಬಗ್ಗೆ ಯಾವಾಗ ಚರ್ಚೆಗೆ ತೆಗೆದುಕೊಳ್ಳುತ್ತೀರಾ ? ೪ ದಿವಸವಾಯಿತು. ಯಾವಾಗ ತೆಗೆದುಕೊಳ್ಳುತ್ತೀರಿ ?

ಅಧ್ಯಕ್ಷರು.—ಈಗ ಒಂದೊಂದೇ ವಿಷಯವಲ್ಲಿ.

(ಗೊಂದಲ)

ನನ್ನ ಕಷ್ಟವನ್ನೂ ನೀವು ತಿಳಿದುಕೊಳ್ಳುವುದಕ್ಕೆ ತಯಾರಿಲ್ಲ. ಈ ಸದನದ ತೀರ್ಮಾನದಂತೆ ನಾನು ಕೆಲಸ ಮಾಡಬೇಕಾಗುತ್ತದೆ.

ಶ್ರೀ ಪಂಪಾಪತಿ.—ತೆಲುಗು ಗಂಗಾ ಕೂಡ ಮುಖ್ಯವಾದ ವಿಷಯ ಆದರಂತೆ ಇನ್ನುಳಿದ ಮುಖ್ಯ ವಿಚಾರಗಳ ಬಗ್ಗೆಯೂ ಚರ್ಚೆಯಾಗಬೇಕು.

ಶ್ರೀ ಬಿ. ಎ. ಉಮರಬ್ಬ.—ಒಂದೊಂದು ವಿಷಯಕ್ಕೂ ಟೈಮನ್ನು ನಿಗದಿ ಮಾಡಿ, ತೆಲುಗು ಗಂಗಾ ವಿಷಯಕ್ಕೆ ಅರ್ಧ ಗಂಟೆ ಫ್ಲಡ್‌ಗೆ ಅರ್ಧ ಗಂಟೆ ಅಂತ ಈ ರೀತಿ ನಿಗದಿ ಮಾಡಿದರೆ ಎಲ್ಲವನ್ನೂ ಮುಗಿಸಬಹುದು.

೨-೦೦ ಪಿ. ಎಂ.

ಅಧ್ಯಕ್ಷರು.—ಪಂಪಾಪತಿಯವರ ವಿಷಯ ತೆಗೆದುಕೊಳ್ಳಬೇಕೋ, ಪ್ರವಾಹದ್ದು ತೆಗೆದುಕೊಳ್ಳಬೇಕೋ ಎಂಬುದನ್ನು ಈ ವಿಷಯ ಮುಗಿದಮೇಲೆ ನೋಡೋಣ. (ಗೊಂದಲ) ನೀವು ಎಲ್ಲರೂ ನಮ್ಮ ಛೇಂಬರ್‌ಗೆ ಬನ್ನಿ. ಈ ವಿಷಯ ಆದಮೇಲೆ ಯಾವುದನ್ನು ತೆಗೆದುಕೊಳ್ಳೋಣ ಎಂಬುದನ್ನು ತೀರ್ಮಾನ ಮಾಡೋಣ. ಇಲ್ಲಿ ಯಾರೂ ಗದ್ದಲ ಮಾಡುವುದು ಬೇರೆ. ನನ್ನ ಛೇಂಬರ್‌ನಲ್ಲಿ ಉಪಾಯ ಹುಡುಕೋಣ ತಾವು ಬನ್ನಿ.

(ಗೊಂದಲ)

ಶ್ರೀ ಪಂಪಾಪತಿ.—ತೆಲುಗು-ಗಂಗಾ ವಿಷಯ ಆದಮೇಲೆ ನಮ್ಮ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಿ ಸ್ವಾಮಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತೆಲುಗು-ಗಂಗಾ ಆದಮೇಲೆ ಲಿಸ್ಟ್‌ನಲ್ಲಿರುವಂತೆ ನಮ್ಮ ಗವರ್ನರ ಸೆಳೆಯುವ ಸೂಚನೆ ತೆಗೆದುಕೊಳ್ಳಿ. (ಗೊಂದಲ)

ಅಧ್ಯಕ್ಷರು.—ಇದನ್ನೆಲ್ಲಾ ನನ್ನ ಛೇಂಬರ್‌ನಲ್ಲಿ ತೀರ್ಮಾನ ಮಾಡೋಣ. ಇಲ್ಲಿ ಈಗ ಚರ್ಚೆ ಪ್ರಾರಂಭವಾಗಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಆ ನಂತರ ನನ್ನ ಗವರ್ನರ ಸೆಳೆವ ಸೂಚನೆ ತೆಗೆದುಕೊಳ್ಳಿ.

ಅಧ್ಯಕ್ಷರು.—ಈಗ ವೀರಪ್ಪ ಮೊಯ್ಲಿಯವರು ಪ್ರಾರಂಭ ಮಾಡಲಿ.